1995-96ನೇ ಸಾಲಿನಲ್ಲಿ ನಡೆಸಿದ ಕಾರ್ಯಕ್ರಮಗಳು

1.	ಶ್ರೀಮತಿ ಜಯಲಕ್ಷ್ಮಿ ಇನಾಂದಾರ ಅಭಿನಂದನಾ ಸಮಿತಿ ಹುಬ್ಬಳ್ಳಿ ಇವರಿಗೆ ಗಮಕಶಾಲೆ ಆರಂಭಿಸಲು ಧನಸಹಾಯ	50000-00
2.	ಶ್ರೀಚಂದ್ರಶೇಖರ ಶಿವಯೋಗಿ ರಾಜ್ಯಯೋಗೀಂದ್ರ ಮಹಾಸ್ವಾಮಿಗಳು ಹೊಸಮಠ ಹುಬ್ಬಳ್ಳಿ ಇವರಿಗೆ ವಿಜಯ ದಶಮಿ ಅಂಗವಾಗಿ ದಸರಾ ಮಹೋತ್ಸವ ಆಚರಣೆಗೆ ಧನಸಹಾಯ	20000-00
3.	ಶ್ರೀ ಕೇಶವ ಗುರು ಹುಬ್ಬಳ್ಳಿ ಇವರಿಗೆ ಮತ್ತು ಶ್ರೀಮತಿ ಜಯಲಕ್ಷ್ಮಿ ಇನಾಂದಾರ ಹುಬ್ಬಳ್ಳಿ ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಗೌರವ ವಿತರಣೆ	5000-00
4.	ಮೂರು ಸಾವಿರ ಮಠ ಮಹಿಳಾ ಕಾಲೇಜು ಆವರಣದಲ್ಲಿ ಸಣ್ಣಾಟ ಪ್ರದರ್ಶನ	2000-00
5.	ಸಂಸ್ಕೃತಿ ಸೌರಭ, ಕಾವ್ಯಕಾವೇರಿ,ಸಂಸ್ಕೃತಿ ಸುದಿನ ಕಾರ್ಯಕ್ರಮಗಳ ಯೋಜನೆಯಡಿ ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯವಸ್ಥೆಗಾಗಿ	38900-00
	ಒಟ್ಟು	**1,16,900-00**

ಹೊಸನಗರ ತಾಲ್ಲೂಕಿನ ಹಸಿರು ಮಗ್ಗೆಯಿಂದ ಸಾಗರಗಳ ಸೇತುವೆ ನಿರ್ಮಾಣ

989 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶರಾವತಿ ಜಲವಿದ್ಯುತ್ ಯೋಜನೆ ಜಾರಿಯಾಗುವ ಮೊದಲು ಹೊಸನಗರ ತಾಲ್ಲೂಕು ಹಸಿರುಮಗ್ಗೆಯಿಂದ ಸಾಗರಕ್ಕೆ ಸಂಚಾರ ಯೋಗ್ಯವಾದ ಮಾರ್ಗ ಇದ್ದುದು ನಿಜವೇ?

ಆ) ಯಾವಾಗ ಈ ಮಾರ್ಗ ಮುಳುಗಡೆಯಾಯಿತು? ಈಗ ಹಸಿರುಮಗ್ಗೆಯಿಂದ ಸಾಗರಕ್ಕೆ ಯಾವ ಮಾರ್ಗ ಬಳಸಲಾಗುತ್ತಿದೆ? ಎಷ್ಟು ಕಿ.ಮೀ. ದೂರವಾಗುತ್ತದೆ?

ಇ) ಲಾಂಚ್‌ನ್ನು ಬಳಸಿದರೆ ಹಸಿರುಮಗ್ಗೆಯಿಂದ ಸಾಗರ ಎಷ್ಟು ಕಿ.ಮೀ. ದೂರವಾಗುತ್ತದೆ ಹಾಗೂ ರಸ್ತೆ ಮಾರ್ಗವನ್ನು ಬಳಸಿದರೆ ಎಷ್ಟು ಕಿ.ಮೀ. ದೂರವಾಗುತ್ತದೆ.

ಈ) ಹಸಿರುಮಗ್ಗೆ ಸೇತುವೆಯನ್ನು ನಿರ್ಮಾಣ ಮಾಡುವುದರ ಮೂಲಕ ಸಂಚಾರಕ್ಕೆ ಅನುಕೂಲ ಮಾಡಿಕೊಡಲು ಸರ್ಕಾರ ಯೋಚಿಸಿದೆಯೇ? ಹಾಗಿದ್ದಲ್ಲಿ ಸೇತುವೆ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು? ಸೇತುವೆ ನಿರ್ಮಾಣದ ಅಂದಾಜು ವೆಚ್ಚ ಎಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಿಜ.

ಆ) 1965-66ರಲ್ಲಿ ಶರಾವತಿ ಯೋಜನೆಯನ್ನು ಕೈಗೆತ್ತಿಕೊಂಡಾಗ ಈ ಮಾರ್ಗ ಮುಳುಗಡೆಯಾಗಿರುತ್ತದೆ. ಈಗ ಹಸಿರುಮಗ್ಗಿಯಿಂದ ಸಾಗರಕ್ಕೆ ಲಾಂಚ್‌ನಲ್ಲಿ ದ್ಹಾಟಿ ರಸ್ತೆ ಮೂಲಕ ಸೇರಲು 25.00 ಕಿ.ಮೀ. ದೂರವಿರುತ್ತದೆ.

ಇ) ಲಾಂಚ್‌ನ್ನು ಬಳಸಿದರೆ ಹಸಿರುಮಗ್ಗಿಯಿಂದ ಸಾಗರಕ್ಕೆ 25.00 ಕಿ.ಮೀ. ಆಗುತ್ತದೆ. ಹಾಗೂ ರಸ್ತೆ ಮುಖಾಂತರ ಅಂದರೆ ಆಡುಗೋಡಿ-ನಗರ-ಹೊಸನಗರ-ಸಾಗರ ಮಾರ್ಗದಲ್ಲಿ 85.00 ಕಿ.ಮೀ. ದೂರವಾಗುತ್ತದೆ.

ಈ) ಸಧ್ಯದಲ್ಲಿ ಈ ಸೇತುವೆ ನಿರ್ಮಿಸುವ ಯಾವ ಪ್ರಸ್ತಾವನೆಯೂ ಇರುವುದಿಲ್ಲ. ಸುಮಾರು 1.50 ಕಿ.ಮೀ. ಉದ್ದದ ಈ ಸೇತುವೆಯನ್ನು ನಿರ್ಮಿಸಲು ಸುಮಾರು 60 ಕೋಟಿ ರೂ. ಬೇಕಾಗಬಹುದು.

ಪಶು ವೈದ್ಯಾಧಿಕಾರಿಗಳ ನೇಮಕಾತಿ

990 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿ ಎಷ್ಟು ಪಶುವೈದ್ಯ ಶಾಲೆಗಳಿವೆ, ಅವುಗಳಲ್ಲಿ ಪಶುವೈದ್ಯರೇ ಇಲ್ಲದ ಪಶು ಚಿಕಿತ್ಸಾಲಯಗಳೆಷ್ಟು?

ಆ) 5-7-95ರಂದು 393 ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ಆರ್ಜಿಯನ್ನು ಸರ್ಕಾರವು ಕರೆದದ್ದು ನಿಜವೇ; ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ19-8-95ರಂದು ರದ್ದುಪಡಿಸಲಾಗಿದೆ?

ಇ) ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕೇವಲ 200 ಹುದ್ದೆಗಳಿಗೆ ಆರ್ಜಿ ಕರೆಯಲು ಸರ್ಕಾರ ಸೂಚಿಸಿರುವುದು ನಿಜವೇ; ಹಾಗಿದ್ದಲ್ಲಿ ಖಾಲಿ ಸ್ಥಾನಗಳಿಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ?

ಈ) ರಾಜ್ಯದಲ್ಲಿ ಎಷ್ಟು ಪಶುವೈದ್ಯಾಧಿಕಾರಿ ಹುದ್ದೆ ಖಾಲಿ ಇದೆ. ನಿರುದ್ಯೋಗಿ ಪಶುವೈದ್ಯಾಧಿಕಾರಿಗಳು ಎಷ್ಟು ಜನರಿದ್ದಾರೆ?

ಉ) ನಿರುದ್ಯೋಗಿ ವೈದ್ಯಾಧಿಕಾರಿಗಳು ವಯೋಮಿತಿ ಮೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) 1) 700

2) 142 ಪಶುವೈದ್ಯ ಶಾಲೆಗಳಲ್ಲಿ ಪಶುವೈದ್ಯಾಧಿಕಾರಿಗಳು ಇರುವುದಿಲ್ಲ.